## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-27

**ಸಂಚಾರ ಇಲಾಖೆ**

ಕರಾಸಾ:ಕೇಕ:ಸಂ:ಸಾ: ಒ-2: 3262 :20-21 ದಿನಾಂಕ: 15-03-2021

**ಸುತ್ತೋಲೆ**

ವಿಷಯ: ಏಪ್ರಿಲ್‌ನಿಂದ ಜೂನ್ ತಿಂಗಳಲ್ಲಿ ಪ್ರಯಾಣಿಕರ ಒತ್ತಡದ ದಿನಗಳಲ್ಲಿ ವಿಶೇಷ ಸಾರಿಗೆಗಳನ್ನು ಆಚರಣೆ ಮಾಡುವ ಬಗ್ಗೆ.

- - - - -

ಏಪ್ರಿಲ್‌ನಿಂದ ಜೂನ್ ಅವಧಿ ಪೀಕ್‌ಸೀಸನ್ ಆಗಿದ್ದು ಸದರಿ ಅವಧಿಯಲ್ಲಿ ಮದುವೆ, ಗೃಹಪ್ರವೇಶ ಇತ್ಯಾದಿ ವಿಶೇಷ ಕಾರ್ಯಕ್ರಮಗಳ ಪ್ರಯುಕ್ತ ಜನಸಂಚಾರ ಹೆಚ್ಚಾಗಿ ಇರುವುದರಿಂದ ನಿಗಮದ ಸಾರಿಗೆಗಳಲ್ಲಿ ಹೆಚ್ಚಿನ ಪ್ರಯಾಣಿಕರ ಒತ್ತಡವನ್ನು ನಿರೀಕ್ಷಿಸಲಾಗಿದೆ. ಆದ್ದರಿಂದ ಈ ಅವಧಿಯಲ್ಲಿ ಸಾರಿಗೆಗಳನ್ನು ಯೋಜನಾ ಬದ್ಧವಾಗಿ ಆಚರಣೆ ಮಾಡಿ ನಿಗಮದ ಸಾರಿಗೆ ಆದಾಯವನ್ನು ಹೆಚ್ಚಿಸಲು ಈ ಕೆಳಕಂಡಂತೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ.

1) ಹಾಲಿ ಆಚರಣೆಯಲ್ಲಿರುವ ಎಲ್ಲಾ ಅನುಸೂಚಿಗಳನ್ನು ಯಾವುದೇ ಕಾರಣಕ್ಕೂ ರದ್ದುಗೊಳಿಸದೇ ಯೋಜನಾಬದ್ಧವಾಗಿ ಆಚರಣೆ ಮಾಡುವುದು ಹಾಗೂ ಕಿ.ಮೀ. ರದ್ಧತಿಯನ್ನು ನಿಯಂತ್ರಣಗೊಳಿಸುವುದು ಮತ್ತು ಯಾವುದೇ ಯೋಜಿತ ರದ್ಧತಿ ಮಾಡದಂತೆ ಕ್ರಮ ಕೈಗೊಳ್ಳುವುದು.
2) ಮುಂಗಡ ಟಿಕೇಟ್ ಬುಕಿಂಗ್ ಹೆಚ್ಚಾಗುವಂತೆ ನೋಡಿಕೊಂಡು ಆದಾಯವನ್ನು ಹೆಚ್ಚಿಸುವುದು ಮತ್ತು ಹೆಚ್ಚು ಸಾರಿಗೆಗಳನ್ನು ಮುಂಗಡ ಬುಕಿಂಗ್ ವ್ಯವಸ್ಥೆಯಲ್ಲಿ ಅಳವಡಿಸುವುದು.
3) ಚಾಲನಾ ಸಿಬ್ಬಂದಿಯ ರಜೆ ಮತ್ತು ಗೈರುಹಾಜರಾತಿಯನ್ನು ನಿಯಂತ್ರಿಸುವುದು.
4) ಚಾಲನಾ ಸಿಬ್ಬಂದಿಗಳನ್ನು ತರಬೇತಿಗೆ ನಿಯೋಜಿಸುವಾಗ ಕಡಿಮೆ ಪ್ರಮಾಣದಲ್ಲಿ ನಿಯೋಜಿಸಿ ಕಾರ್ಯಾಚರಣೆಗೆ ಹೆಚ್ಚು ಚಾಲನಾ ಸಿಬ್ಬಂದಿಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು.
5) ವಿಭಾಗಗಳಲ್ಲಿ ಭಾರಿ ಕವಚ ದುರಸ್ಥಿಗಿರುವ/ಆಫ್‌ರೋಡ್ ಆಗಿರುವ ವಾಹನಗಳನ್ನು ತ್ವರಿತವಾಗಿ ಸುಸ್ಥಿತಿಗೊಳಿಸಿ, ವಾಹನಗಳನ್ನು ಕಾರ್ಯಾಚರಣೆಗೆ ಲಭ್ಯವಿರಿಸಿಕೊಳ್ಳುವುದು. ಅದೇ ರೀತಿ ಎಫ್‌ಸಿ ನವೀಕರಣ ಸಹ prepone ಮಾಡಿಕೊಂಡು ಪೀಕ್ ಸೀಸನ್ ಅವಧಿಯಲ್ಲಿ ಯಾವುದೇ ವಾಹನಗಳು ಮೇಲ್ಕಂಡ ಕಾರಣಗಳಿಂದಾಗಿ ಕಾರ್ಯಾಚರಣೆಗೆ ಲಭ್ಯವಿಲ್ಲದಂತಾಗುವುದನ್ನು ತಪ್ಪಿಸುವುದು.
6) ಜನಸಂದಣಿ ಹೆಚ್ಚು ಇರುವ ದಿನಗಳಲ್ಲಿ ಬಸ್ ನಿಲ್ದಾಣಗಳಲ್ಲಿ ಅಧಿಕಾರಿ/ಮೇಲ್ವಿಚಾರಕ ಸಿಬ್ಬಂದಿಗಳನ್ನು ನಿಯೋಜನೆ ಮಾಡಿ ಕಾರ್ಯಾಚರಣೆ ಉಸ್ತುವಾರಿ ನೋಡಿಕೊಳ್ಳುವುದು.
7) ವಿಭಾಗದ ಅಧಿಕಾರಿ ಮತ್ತು ಆಡಳಿತ ಸಿಬ್ಬಂದಿಯನ್ನು ತನಿಖಾ ಕಾರ್ಯಗಳಿಗೆ ಬಳಸಿಕೊಂಡು ಮಾರ್ಗತನಿಖೆ ಚುರುಕುಗೊಳಿಸುವುದು.
8) ಚಾಲನಾ ಸಿಬ್ಬಂದಿಗಳ ಶಿಸ್ತು ಪ್ರಕರಣಗಳಲ್ಲಿ ತೀರಾ ಅವಶ್ಯಕತೆ ಇರುವ ಪ್ರಕರಣಗಳ ವಿಚಾರಣೆಯನ್ನು ಮಾತ್ರ ಮಾಡುವುದು. ಉಳಿದ ವಿಚಾರಣೆಗಳನ್ನು ಪೀಕ್ ಸೀಸನ್ ಅವಧಿಯ ನಂತರ ಮಾಡುವುದು.
9) ಬೇಸಿಗೆ ವಿಶೇಷ ಅಂತರರಾಜ್ಯ ಮಾರ್ಗಗಳಲ್ಲಿ ಹೆಚ್ಚುವರಿ ಸಾರಿಗೆಗಳನ್ನು ಪರವಾನಗಿ, ವೇಳಾ ಸಹಮತಿ ಇತ್ಯಾದಿ ಪಡೆದು ನಿಯಮಾನುಸಾರ ಕಾರ್ಯಾಚರಣೆ ಮಾಡುವುದು.
10) ವಾರಾಂತ್ಯ/ವಿಶೇಷ ದಿನಗಳಲ್ಲಿ ಅವಶ್ಯಕತೆ ಹಾಗೂ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಹೆಚ್ಚುವರಿ/ವಿಶೇಷ ಸಾರಿಗೆಗಳನ್ನು ಕಾರ್ಯಾಚರಿಸುವುದು.

ಮೇಲ್ಕಂಡ ವಿಷಯವಾಗಿ ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ಕಳುಹಿಸುವುದು.

ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ)

**ಪ್ರತಿಯನ್ನು :** ಎಲ್ಲಾ ವಿಭಾಗ ಉಸ್ತುವಾರಿ ಅಧಿಕಾರಿಗಳು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

**ಪ್ರತಿಯನ್ನು :** ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

**ಪ್ರತಿಯನ್ನು:** ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಭ& ಜಾ)/ ನಿರ್ದೇಶಕರು (ಸಿ & ಪ) ರವರ ಹಿರಿಯ/ಆಪ್ತ ಕಾರ್ಯದರ್ಶಿಗಳು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.

1221 16/3/21

Sheshank 16/3